**ನಿಜಕ್ಕೂ ಗರ್ಭಕೋಶವೆ ಹೆಣ್ಣಿನ ಅಸ್ತಿತ್ವವೇ? ಎನ್ನುವ ಪ್ರಶ್ನೆಯೂ, ರಾಶಿ ಉಪದೇಶಗಳು ಬೇರೆ, ಸಾಕು ಅನಿಸುತ್ತಿತ್ತು. ತಿಂಗಳ ರಗಳೆಯಿಂದ ಪಾರಾಗಿದ್ದು ಸಣ್ಣ ನೆಮ್ಮದಿ ಎಂದು ಒಮ್ಮೆ ಅನಿಸಿದರೂ ಮತ್ತೆ ಅದೇ ಹೆಣ್ತನವಾಗಿಯೂ ಕಾಣತೊಡಗಿದಾಗ ವಿಚಲಿತಳಾಗಿದ್ದಳು.**

ಕ್ಷಣದಲ್ಲಿ ಸಂಬಂಧವೇ ಇಲ್ಲದಂತೆ ತಿರುಗಿ ಮಲಗುತ್ತಿದ್ದ. ಪಲ್ಲವಿಗೆ ಏನೋ ಕಳಕೊಂಡ ಭಾವ ಬಲಿಯತೊಡಗಿತ್ತು.

ಬ್ಯಾಂಕಿನಲ್ಲಿ ಅಂದು ಭರ್ತಿ ರಶ್, ಮುಂದಿನ ನಾಲ್ಕು ದಿನಗಳ ಕಾಲ ಹಬ್ಬಗಳ ರಜೆಯಿದ್ದುದರಿಂದಲೊ ಏನೊ ಸಾಲುದ್ದದ ಕ್ಯೂ. ಕ್ಯಾಶ್ ಹ್ಯಾಂಡಲ್ ಮಾಡುತ್ತಿದ್ದ ಪಲ್ಲವಿ ಎಂದಿಗಿಂತಲೂ ಹೆಚ್ಚು ಬೆವರುತ್ತಿದ್ದಳು. ತಿಂಗಳ ಸ್ರಾವವೂ ಹೆಚ್ಚಿದ್ದರಿಂದ ಕಿರಿಕಿರಿಯಾಗುತ್ತಿತ್ತು. ಇನ್ನು ತಾಳಲಾರೆ ಎಂದು ಮ್ಯಾನೇಜರ್‌ಗೆ ಹೇಳಿ ರೆಸ್ಟ್ ರೂಮಿಗೆ ಬಂದು ಕೂತಳು. 'ತಿಂಗಳ ಸ್ರಾವ ಯಾಕೊ ಹೆಚ್ಚಾಗುತ್ತಿದೆ, ಇದು ಐದನೆಯ ದಿನವಾದರೂ ನಿಲ್ಲುವ ಲಕ್ಷಣ ಕಾಣುತ್ತಿಲ್ಲವಲ್ಲ. ಇನ್ನೂ ಮೂವತ್ತೇಳು ನಂಗೆ. ಇಷ್ಟು ಬೇಗ... ಈ ತೊಂದರೆಗಳು...' ಯಾಕೋ ತನ್ನ ಗೈನಕಾಲಜಿಸ್ಟ್‌ನ ಭೇಟಿಯಾಗಲೇಬೇಕು ಎನಿಸಿತು. ವಾರದಲ್ಲೇ ಡಾ. ವಿದ್ಯಾ ಬಳಿ ಹೋಗಿದ್ದಾಗ ಅವರು, 'ಯುಟೆರಸ್ ಬಾಯಿಯ ಬಳಿ ಸಣ್ಣ ಫೈಬ್ರಾಯ್ಡ್ ಬೆಳವಣಿಗೆ ಇದೆ, ಬೇಗ ಗರ್ಭಕೋಶ ತಗೆಯುವುದೊಳ್ಳೆಯದು, ಇಲ್ಲಾಂದ್ರೆ ಅದು ಕ್ಯಾನ್ಸರ್ ಆಗಿ ಪರಿಣಮಿಸುವ ಅಪಾಯವೂ ಇದೆ' ಎಂದು ಹೇಳಿದ್ದು ಕೇಳಿ ಒಮ್ಮೆ ಸ್ತಬ್ಧಳಾದಳು ಪಲ್ಲವಿ. 'ನಂಗಾ ಇದೆಲ್ಲ, ನಾನೇ ಯಾಕೆ?' ಎನ್ನುವ ಹತಾಶೆಯೂ ಮೂಡಿತು. ಒಂದು ವಾರವಿಡೀ ಕಣ್ಣು ತುಂಬಿಕೊಂಡೇ ಇದ್ದಾಗ ನೋಡಲಾರದೆ ವಿಜ್ಜು, 'ಪಲ್ಲು, ಅಂಥದ್ದೇನೂ ಆಗಿಲ್ಲ. ಇದು ಸಣ್ಣ ವಿಷ್ಯ, ನಮಗೊಬ್ಬ ಅದ್ಭುತ ಮಗಳಿದ್ದಾಳೆ. ಆರೋಗ್ಯ ಮುಖ್ಯ ಅಲ್ವೇ. ನೀನು ಎಜುಕೇಟೆಡ್ ಆಗಿ ಹೀಗೆಲ್ಲ ಯೋಚ್ನೆ ಮಾಡ್ತಿದಿ ಅಂದ್ರೆ... ಕಮಾನ್ – ಚಿಯರ್ ಅಪ್' ಎಂದಿದ್ದ.

ತಿಂಗಳಲ್ಲಿ ಆಪರೇಶನ್ ಆಗಿ ರೆಸ್ಟ್ ಮುಗಿಸಿ ಪಲ್ಲವಿ ಮತ್ತೆ ಬ್ಯಾಂಕಿಗೆ ಹೋಗಲು ಆರಂಭಿಸಿದ್ದಳು. ಏನನ್ನೊ ಕಳಕೊಂಡ ಅನುಭವವಾಗುತ್ತಿತ್ತು. ನಿಜಕ್ಕೂ ಗರ್ಭಕೋಶವೆ ಹೆಣ್ಣಿನ ಅಸ್ತಿತ್ವವೇ? ಎನ್ನುವ ಪ್ರಶ್ನೆಯೂ, ರಾಶಿ ಉಪದೇಶಗಳೂ... ಸಾಕು ಅನಿಸುತ್ತಿತ್ತು. ತಿಂಗಳ ರಗಳೆಯಿಂದ ಪಾರಾಗಿದ್ದು ಸಣ್ಣ ನೆಮ್ಮದಿ ಎಂದು ಒಮ್ಮೆ ಅನಿಸಿದರೂ ಮತ್ತೆ ಅದೇ ಹೆಣ್ತನವಾಗಿಯೂ ಕಾಣತೊಡಗಿದಾಗ ವಿಚಲಿತಳಾಗಿದ್ದಳು. 'ನೀನು ಸೈನ್ಸ್ ಸ್ಟುಡೆಂಟ್ ಆಗಿಯೂ ಹೀಗೆ ಯೋಚ್ನೆ ಮಾಡ್ತಿದಿ ಅಂದ್ರೆ ಎಜುಕೇಶನ್ನೇ ವೇಸ್ಟ್' ಎಂದೂ ವಿಜ್ಜು ಮತ್ತೆ ಮತ್ತೆ ಹೇಳಿದ್ದ. ಅವನ ಬಳಿಯೂ ಮೊದಲಿನಂತೆ ಉತ್ಸಾಹದಿಂದ ಹೋಗಲು ಮನಸ್ಸು ಸಜ್ಜಾಗುತ್ತಿರಲಿಲ್ಲ. ನಾನು ಅರಳದೆ ಹೋದರೆ, ದೇಹ ಕೈಕೊಟ್ಟರೆ ಹೀಗೆ ಏನೇನೋ ಯೋಚನೆಗಳಿಂದ ಪಲ್ಲವಿ ಮುದುರುತ್ತಿದ್ದಳು. ಆದರೆ ವಿಜ್ಜು ಆಗೊಮ್ಮೆ ಈಗೊಮ್ಮೆ ತೋರುತ್ತಿದ್ದ ಪ್ರೀತಿಗೆ ಶರಣಾಗಿ ಸಹಜವಾಗಿ ಅರಳತೊಡಗಿದ್ದಳು. ಎಲ್ಲವೂ ಸರಿಯಾಗಿ ನಡೆಯಲು ಆರಂಭಿಸಿತ್ತು. ತನ್ನ ದೇಹದಲ್ಲಾದ ಬದಲಾವಣೆಗಳನ್ನು ಒಪ್ಪಿಕೊಂಡು, ಪಲ್ಲವಿ ಮೊದಲಿನಂತೆ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಕೊಂಡಳು.

ಪ್ರಮೋಶನ್ ಪಡೆದು ಆಫೀಸರ್ ಆದ ಪಲ್ಲವಿಯ ಜವಾಬ್ದಾರಿಗಳು ಹೆಚ್ಚಾದಂತೆ ವಿಜ್ಜು